## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 231/**21** |

| | | |
|---|---|---|
| ಸಾಕ್ಷಿದಾರರ ಹೆಸರು | ಪ್ರಸನ್ನ | |
| ತಂದೆಯ ಹೆಸರು | ಎಚ್.ಎಸ್.ನಾಗರಾಜು | ಸಾಕ್ಷಿಗೆ ದಿಃ **24.08.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **30** ವರ್ಷ | |
| ಉದ್ಯೋಗ | ಕಾರಪೇಂಟರ್ ಕೆಲಸ | ಪಿ.ಡಬ್ಲ್ಯೂ **-02** |
| ವಾಸ ಸ್ಥಳ | ಮೇಟಗಳ್ಳಿ, ಮೈಸೂರು | ಸಿ.ಡಬ್ಲ್ಯೂ **-02** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ದಿಃ 03.10.2021 ರಂದು ಸಾಯಂಕಾಲ 9.30 ರಿಂದ 10.45 ಗಂಟೆಯ ಸಮಯದಲ್ಲಿ ಪೊಲೀಸರು ಮಂಚ್ಚೇಗೌಡನ ಕೊಪ್ಪಲು, ಮುಖ್ಯ ರಸ್ತೆಯಲ್ಲಿ ಇರುವ ಒಬ್ಬ ವಯಸ್ಸಾದ ಅಜ್ಜಿಯ ಮನೆಯಲ್ಲಿ ಸ್ಥಳದ ಪಂಚನಾಮೆ ಮಾಡಿ ಪಂಚನಾಮೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯ ಕಾಲಕ್ಕೆ ಸ್ಥಳದಲ್ಲಿ ನೋಡಿದಾಗ ಕಿಟಕಿ ಗ್ಲಾಸ್ ಗಳು ಒಡೆದಿದ್ದವು, ಬೀಗದ ಕೈ ಕೆಳಗೆ ಬಿದ್ದಿತು. ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಪೊಲೀಸರು ಪಂಚನಾಮೆಯ ಕಾಲಕ್ಕೆ ಬೀಗದ ಕೈ ಮತ್ತು ಗ್ಲಾಸ್ ನ ಚೂರುಗಳನ್ನು ವಶಪಡಿಸಿಕೊಂಡಿರುತ್ತಾರೆ.  ಸ್ಥಳದಲ್ಲಿ ನೋಡಿದಾಗ ಒಬ್ಬ ಅಜ್ಜಿ ಮೃತಪಟ್ಟಿದ್ದಳು, ಬಲ ಗೈ, ಬಲಭಾಗದ ಕತ್ತು, ಬಲಭಾಗದ ಹಣೆ ಮತ್ತು ಬಲಗಾಲಿಗೆ ಮತ್ತು ಎದೆಯ ಭಾಗಕ್ಕೆ ಗಾಯಗಳು ಆಗಿದ್ದವು. ಸಾಕ್ಷಿಯು ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳು ಈಗಾಗಲೇ ನಿಪಿ-3 ರಿಂದ ನಿಪಿ-9 ಎಂದು ಈಗಾಗಲೇ ಗುರುತಿಸಲಾಗಿದೆ. ಪಂಚನಾಮೆಯ ಕಾಲಕ್ಕೆ ಚೇತನ್ ಕೂಡಾ ನನ್ನ ಜೊತೆ ಇದ್ದರು, ಪಿರ್ಯಾಧಿದಾರಳು ಕೂಡಾ ಇದ್ದಳು. ನಿಪಿ-7 ಪೋಟೋದಲ್ಲಿ ನಾನು ಕಾಣುತ್ತಿದ್ದೇನೆ ಎಂದು ಸಾಕ್ಷಿ

ಒಪ್ಪಿಕೊಂಡಿರುತ್ತಾನೆ. ಸಾಕ್ಷಿಯು ಬೀಗದ ಕೈ ಮತ್ತು ಗ್ಲಾಸ್ ಚೂರುಗಳನ್ನು ನೋಡಿ ಗುರುತಿಸಿದ್ದು, ಅವುಗಳು ಈಗಾಗಲೇ ಎಂ.ಓ-1 ಮತ್ತು ಎಂ.ಓ-2 ಎಂದು ಗುರುತಿಸಲಾಯಿತು. ನಾನು ಪಂಚನಾಮೆ ಮುಗಿಯುವವರೆಗೆ ರಾತ್ರಿ 10.45 ವರೆಗೆ ಸ್ಥಳದಲ್ಲೆ ಇದ್ದೆನು. ಪೊಲೀಸರು ಕೊಟ್ಟ ನೋಟಿಸ್ ನ ಮೇಲಿರುವ ಸಹಿಯನ್ನು ಸಾಕ್ಷಿಯು ಒಪ್ಪಿಕೊಂಡಿದ್ದು, ಪೊಲೀಸ್ ನೋಟಿಸ್ ನ್ನು ನಿಪಿ-11 ಎಂದು ಗುರುತಿಸಲಾಯಿತು. (ಮೂಲ ದಾಖಲೆಗಳು ಎಸ್.ಸಿ ನಂಬರ್ 18/22 ರಿಂದ ತರಿಸಿಕೊಂಡು ನಿಶಾನೆ ಎಂದು ಈ ಕೇಸಿನಲ್ಲಿ ಗುರುತಿಸಿ ದಾಖಲೆಗಳು ಅದೇ ಕಡತಕ್ಕೆ ರವಾನಿಸಲಾಗಿದೆ.)

**<u>ಪಾಟೀಸವಾಲು :-ಆರೋಪಿ ಪರ ವಕೀಲರಾದ ಎನ್.ಎನ್.ಆರ್. ರವರಿಂದಃ-</u>**

ನಾನು 7 ನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕಾರಪೇಂಟರ್ ಕೆಲಸ ಮಾಡುತ್ತೇನೆ. ಪೊಲೀಸರು ಪಂಚನಾಮೆಗೆ ಬನ್ನಿ ಎಂದು ನೋಟಿಸ್ ಕೊಟ್ಟಿದ್ದಾರಾ ಎಂದು ಕೇಳಿದ್ದಕ್ಕೆ ಸಾಕ್ಷಿಯು ನಾವೇ ಪೊಲೀಸ್ ಠಾಣೆಗೆ ಬಂದು ನೋಟಿಸ್ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಕ್ಕೆ ಎಂದು ಹೇಳುತ್ತಾರೆ. ಪಿರ್ಯಾಧಿ ನನಗೆ ಸಂಬಂಧಿಕರಾಗಬೇಕು, ಪಿರ್ಯಾಧಿ ನನಗೆ ನಮ್ಮ ಪರವಾಗಿ ಸಾಕ್ಷಿ ಹೇಳಿ ಎಂದು ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಪಿರ್ಯಾಧಿಗೆ ನಾನು ಫೋನ್ ಮಾಡಿದಾಗ ತನ್ನ ತಾಯಿಯು ಮೃತಪಟ್ಟಿದ್ದಾಳೆ ಎಂದು ಹೇಳಿದಾಗ ನಾನು ಸ್ವತಃ ಸ್ಥಳಕ್ಕೆ ಹೋಗಿದ್ದೆನು. ನಾನು ಪೊಲೀಸರು ಬಂದ ನಂತರ ಮನೆಯ ಒಳಗಡೆ ಹೋಗಿರುತ್ತೇನೆ. ಸ್ಥಳದಲ್ಲಿ 4 ಜನ ಇದ್ದೆವು, ನಾನು, ಪಿರ್ಯಾಧಿ, ಚೇತನ್ ಮತ್ತು ಇನ್ನೊಬ್ಬರು ಇದ್ದರು ಅವರ ಹೆಸರ ನನಗೆ ಗೊತ್ತಿಲ್ಲ.

ನಂಜಮ್ಮ ಇವಳ ಶವದ ಕಾಲುಗಳು ಉತ್ತರ ದಿಕ್ಕಿನಲ್ಲಿ ಇದ್ದವು, ಶವವು ಅಂಗಾತವಾಗಿ ಮಲಗಿತ್ತು, ಮೃತ ನಂಜಮ್ಮ ಇವರಿಗೆ ಅಂದಾಜು ವಯಸ್ಸು 80 ವರ್ಷ ಮೇಲಾಗಿತ್ತು. ಶವದ ಮೇಲೆ ಬೆಡ್‌ಶೀಟ್ ಹಾಕಿದ್ದರು, ನಂಜಮ್ಮ ಸೀರೆ ಹಳದಿ ಬಣ್ಣದ್ದು ಇತ್ತು. ರೂಂ ನ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ಶವ ಹಾಸಿಗೆಯ ಮೇಲೆ ಅಂದರೆ ಬೆಡ್‌ಶೀಟ್ ಮೇಲೆ ಮಲಗಿತ್ತು. ನಾನು ಹಾಸಿಗೆಯ ಬಣ್ಣವನ್ನು ನೋಡಿರುವುದಿಲ್ಲ. ಶವ ಇದ್ದ ರೂಂ ನಲ್ಲಿ ಏನು

ವಸ್ತುಗಳು ಇದ್ದವು ಎಂದು ಕೇಳಿದ್ದಕ್ಕೆ ಸಾಕ್ಷಿಯು ಶವದ ಬಲಗಡೆ ಗ್ಯಾಸ್ ಸ್ಟೌವ ಇತ್ತು, ಶವದ ಎಡಗಡೆ ಬಟ್ಟೆಗಳು ಇದ್ದವು, ತಲೆಯ ಹಿಂದುಗಡೆ ಪಾತ್ರೆಗಳು ಇದ್ದವು. ಶವ ಇದ್ದ ರೂಂ ನಲ್ಲಿ ಶೌಚಾಲಯದ ವ್ಯವಸ್ಥೆ ಇರಲಿಲ್ಲ, ಶೌಚಾಲಯದ ವ್ಯವಸ್ಥೆ ಹೊರಗಡೆ ಇತ್ತು. ಪಂಚನಾಮೆಯನ್ನು ಪೊಲೀಸರು ಬರೆದಿರುತ್ತಾರೆ. ಪಂಚನಾಮೆಯನ್ನು ನಮ್ಮ ಮುಂದೆ ಬರೆದಿರುತ್ತಾರೆ. ನಾನು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ. ಶವ ಇದ್ದ ಕೋಣೆಯು 8 ಅಡಿ ಅಗಲ, 10 ಅಡಿ ಉದ್ದ ಇತ್ತು. ಮನೆಯ ಗೋಡೆಯ ಬಣ್ಣ ಯಾವುದು ಇತ್ತು ಎಂದು ನಾನು ನೋಡಿಲ್ಲ. ನಾನು ಪಿರ್ಯಾಧಿಯ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮಾ ಯಾವುದೇ ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು